**<u>ಸಾಕ್ಷಿಯನ್ನು ದಿನಾಂಕ 19-08-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>.**

**<u>ಪಾಟೀ ಸವಾಲುಃ ವಾದಿಯರ ಪರ ಶ್ರೀ ಟಿ.ಸಿ.ಜಿ ವಕೀಲರಿಂದಃ</u>**

1. ಚುನಾವಣಾ ಆಯೋಗದ SIR ಕೆಲಸಗಳು ನೆನ್ನೆಗೆ ಮುಕ್ತಾಯವಾಗಿದೆ ಎಂದರೆ ಸರಿ. ಸಾರ್ವಜನಿಕರ ವಿನಂತಿ ಮೇರೆಗೆ ಸದರಿ ಕೆಲಸವನ್ನು 08.08.2026 ರವರೆಗೆ ಮುಂದೂಡಲಾಗಿತ್ತು ಎಂದರೆ ಸರಿ. SIR ಕೆಲಸವಿರುವುದರಿಂದ ಸಾಕ್ಷಿ ವಿಚಾರಣೆಗೆ ಹಾಜರಾಗಲು ಸಾಧ್ಯವಿಲ್ಲ ಎಂದು ನಿಡಿ–1 ರಲ್ಲಿ ಪೌರಯುಕ್ತರು ತಿಳಿಸಿರುವ ಕಾರಣಗಳು ಸುಳ್ಳು ಎಂದರೆ ಸರಿಯಲ್ಲ. ಸತ್ಯಾಂಶವನ್ನು ಮುಚ್ಚಿಡುವ ಸಲುವಾಗಿ ಸದರಿಯವರು ಸಾಕ್ಷಿ ವಿಚಾರಣೆಗೆ ಒಳಪಡುತ್ತಿಲ್ಲ ಎಂದರೆ ಸರಿಯಲ್ಲ.

2. ಭದ್ರಾವತಿ ನಗರ ಸಭೆ ವ್ಯಾಪ್ತಿಯಲ್ಲಿ ಒಟ್ಟು 35 ವಾರ್ಡ್ ಗಳು ಇದೆ ಎಂದರೆ ಸರಿ. ನಗರ ಸಭೆ ವ್ಯಾಪ್ತಿಯಲ್ಲಿ ಸರ್ಕಾರಿ ಆಸ್ತಿ, ಕಂದಾಯ ಇಲಾಖೆಯ ಆಸ್ತಿ ಮತ್ತು ನಗರ ಸಭೆಗೆ ಸೇರಿದ ಆಸ್ತಿಗಳು ಇದೆ ಎಂದರೆ ಸರಿ. ಕಂದಾಯ ಇಲಾಖೆಯ ಆಸ್ತಿಗಳಲ್ಲಿ ಬಡವರಿಗೆ ವಸತಿ ಉದ್ದೇಶದಿಂದ ಭದ್ರಾವತಿ ತಹಶೀಲ್ದಾರ್ ರವರ ಮೂಲಕ ಮನೆ ಕಟ್ಟಿಕೊಳ್ಳಲು ಜಾಗ ಮಂಜೂರು ಮಾಡಲಾಗಿದೆ ಎಂದರೆ ಸರಿ. ಅದರಂತೆ ದಾವಾ ಸ್ವತ್ತು 1 ನೇ ವಾದಿಯ ಗಂಡ ಪುಟ್ಟಸ್ವಾಮಿ ಗೌಡರವರಿಗೆ ತಹಶೀಲ್ದಾರ್ ರವರು ದಿನಾಂಕ 04.07.2023 ರಂದು ಮಂಜೂರು ಮಾಡಿದ್ದರು ಎಂದರೆ ಸರಿ. ಅದರಂತೆ ಪುಟ್ಟಸ್ವಾಮಿ ಗೌಡರಿಗೆ ಹಕ್ಕು ಪತ್ರವನ್ನು

ವಿತರಿಸಲಾಗಿತ್ತು ಎಂದರೆ ಸರಿ. ತಮ್ಮ ಜೀವಿತಾವಧಿಯಲ್ಲಿ ಪುಟ್ಟಸ್ವಾಮಿ ಗೌಡ ದಾವಾ ಸ್ವತ್ತಿನಲ್ಲಿ ಒಂದು ಎಸಿ ಶೀಟ್ ಮನೆಯನ್ನು ನಿರ್ಮಾಣ ಮಾಡಿದ್ದರು ಎಂದರೆ ಸರಿ. ಅವರ ಜೀವಿತಾವಧಿಯಲ್ಲೇ ಹಕ್ಕು ಪತ್ರದ ಪ್ರಕಾರ ದಾವಾ ಸ್ವತ್ತಿನ ಖಾತೆ ಅವರ ಹೆಸರಿಗೆ ಆಗಿತ್ತು ಎಂದರೆ ಸಾಕ್ಷಿ ಪುಟ್ಟಸ್ವಾಮಿ ಗೌಡ ಬದುಕಿದ್ದಾಗ ಖಾತೆ ಆಗಿಲ್ಲ, ಅವರು ತೀರಿಕೊಂಡ ನಂತರ ವಾದಿಯರ ಹೆಸರಿಗೆ ಆಗಿದೆ ಎನ್ನುತ್ತಾರೆ.

3. ಪುಟ್ಟಸ್ವಾಮಿ ಗೌಡ ತೀರಿಕೊಂಡ ನಂತರ ವಾದಿಯರು ದಾವಾ ಸ್ವತ್ತಿನ ಮಾಲಿಕರಾಗಿ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿ. ಅವರ ಹೆಸರಿಗೆ ಎಲ್ಲಾ ದಾಖಲೆಗಳು ಇದೆ ಎಂದರೆ ಸರಿ. ದಾಖಲೆಗಳನ್ನು ಪರಿಶೀಲನೆ ಮಾಡಿ ನಗರ ಸಭೆಯವರು 1 ನೇ ವಾದಿಯ ಹೆಸರಿಗೆ ಇ–ಸ್ವತ್ತು ದಾಖಲೆ ಕೊಟ್ಟಿದ್ದಾರೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿರುವ ಮನೆಯಲ್ಲಿ ವಾದಿಯರು ವಾಸವಿದ್ದಾರೆ ಎಂದರೆ ಸರಿ. ಸದರಿ ಮನೆಗೆ ವಿದ್ಯುತ್ ಸಂಪರ್ಕ ಮತ್ತು ನಗರ ಸಭೆಯಿಂದ ನೀರಿನ ಸಂಪರ್ಕವನ್ನು ವಾದಿಯರು ಪಡೆದುಕೊಂಡಿದ್ದಾರೆ ಎಂದರೆ ಸರಿ. ಯಾವುದೇ ಬಾಕಿ ಉಳಿಸಿಕೊಳ್ಳದೆ ವಾದಿಯರು ನಗರ ಸಭೆಗೆ ಕಂದಾಯವನ್ನು ಕಟ್ಟಿದ್ದಾರೆ ಎಂದರೆ ಸರಿ.

4. ದಾವಾ ಸ್ವತ್ತಿಗೆ ಸಂಬಂಧಪಟ್ಟ ಹಕ್ಕು ಪತ್ರವನ್ನು ಪುಟ್ಟಸ್ವಾಮಿ ಗೌಡರಿಗೆ ವಿತರಿಸಿ 23 ವರ್ಷ ಆಯಿತು ಎಂದರೆ ಸರಿ. ಸದರಿ ಹಕ್ಕು ಪತ್ರವನ್ನು ಇಲ್ಲಿಯವರೆಗೆ ನಗರ ಸಭೆಯವರಾಗಲಿ ಅಥವಾ ಬೇರೆ ಯಾರೇ ಆಗಲಿ ಸಕ್ಷಮ ಪ್ರಾಧಿಕಾರದ ಮುಂದೆ ಇಲ್ಲಿಯವರೆಗೆ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ನಗರ ಸಭೆ ವ್ಯಾಪ್ತಿಯಲ್ಲಿರುವ ಕಂದಾಯ ಆಸ್ತಿಯನ್ನು ಮಂಜೂರು ಮಾಡಲು

ತಹಶೀಲ್ದಾರ್ ರವರಿಗೆ ಅಧಿಕಾರ ಇಲ್ಲ ಎಂದು ತಿಳಿಸುವ ಯಾವುದೇ ಸರ್ಕಾರಿ ಸುತ್ತೋಲೆ ಅಥವಾ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ.

5. ದಿನಾಂಕ 07.07.2025 ಮತ್ತು 10.07.2025 ರಂದು ನಗರ ಸಭೆ ಅಧಿಕಾರಿಗಳು ದಾವಾ ಸ್ವತ್ತಿನ ಬಳಿ ಹೋಗಿ ವಾದಿಯರ ಸ್ವಾಧೀನಕ್ಕೆ ತೊಂದರೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಈ ಸಂಬಂಧ ವಾದಿ ಪೊಲೀಸರಿಗೆ ದೂರು ಕೊಟ್ಟರು ಉಪಯೋಗ ಆಗದ ಕಾರಣ ಅವರು ಈ ದಾವೆ ಸಲ್ಲಿಸಬೇಕಾಯಿತು ಎನ್ನುವುದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿನ ವಾದಿಯರ ಕಾನೂನು ಬದ್ದ ಸ್ವಾಧೀನಕ್ಕೆ ತೊಂದರೆ ಕೊಡಲು ನಗರ ಸಭೆ ಅಥವಾ ಅದರ ಅಧಿಕಾರಿಗಳಿಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿ. ನಗರ ಸಭೆ ಪರವಾಗಿ ಈ ದಾವೆಯಲ್ಲಿ ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ವಾದಿಯರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**